# ಚನ್ನಪಟ್ಟಣ ಯೋಜನಾ ಪ್ರಾಧಿಕಾರ
# ಚನ್ನಪಟ್ಟಣ

**2018–19 ನೇ ಸಾಲಿನ ವಾರ್ಷಿಕ ವರದಿ**
**(01.04.2018 ರಿಂದ 31.03.2019 ರ ವರೆಗೆ)**

**ನಂ. 2850, ಮೊದಲನೇ ಮಹಡಿ, ಚರ್ಚ್ ಸ್ಟ್ರೀಟ್, ರಾಜಾಕೆಂಪೇಗೌಡ ಬಡಾವಣೆ, ಚನ್ನಪಟ್ಟಣ ತಾಲ್ಲೂಕು, ಪಿನ್ ಕೋಡ್ – 562 160.**

url: www.channapattana.tpa.gov.in

E-mail: cptpa2017@gmail.com

# ಚನ್ನಪಟ್ಟಣ ಯೋಜನಾ ಪ್ರಾಧಿಕಾರ
# 2018–19 ನೇ ಸಾಲಿನ ವಾರ್ಷಿಕ ವರದಿ

## ಪ್ರಸ್ತಾವನೆ (Introdution):

ಚನ್ನಪಟ್ಟಣ ಯೋಜನಾ ಪ್ರಾಧಿಕಾರವು ರಾಜ್ಯ ಸರ್ಕಾರದ ಆಡಳಿತಕ್ಕೆ ಒಳಪಟ್ಟು ಕಾರ್ಯ ನಿರ್ವಹಿಸುವ ಸ್ವಾಯತ್ತ ಸಂಸ್ಥೆಗಳಲ್ಲಿ ಒಂದಾಗಿದ್ದು, ಈ ಪ್ರಾಧಿಕಾರದ ಕಛೇರಿ **ನಂ. 2850, ಮೊದಲನೇ ಮಹಡಿ, ಚರ್ಚ್ ಸ್ಟ್ರೀಟ್, ರಾಜಾಕೆಂಪೇಗೌಡ ಬಡಾವಣೆ, ಚನ್ನಪಟ್ಟಣ ತಾಲ್ಲೂಕು, ಚನ್ನಪಟ್ಟಣ–562 160** ಇಲ್ಲಿ ಕಾರ್ಯನಿರ್ವಹಿಸುತ್ತಿದೆ. ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರು ಪ್ರಾಧಿಕಾರದ ಅಧ್ಯಕ್ಷರಾಗಿರುತ್ತಾರೆ. ಕನಕಪುರ ಯೋಜನಾ ಪ್ರಾಧಿಕಾರದ ಸಹಾಯಕ ನಿರ್ದೇಶಕರಾದ ಶ್ರೀ ಜಗನ್ನಾಥ ಇವರನ್ನು ಹೆಚ್ಚುವರಿ ಪ್ರಭಾರದಲ್ಲಿ ಈ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾಗಿ ನಿಯೋಜಿಸಲಾಗಿದೆ. ಸದರಿಯವರು ಈ ಪ್ರಾಧಿಕಾರದ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಕಾರ್ಯನಿರ್ವಹಿಸುತ್ತಾರೆ.

## ಚನ್ನಪಟ್ಟಣ ಯೋಜನಾ ಪ್ರಾಧಿಕಾರದ ಕಾರ್ಯಾರಂಭದ ಬಗ್ಗೆ:

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/237/ಬೆಂ.ರೂ.ಪ್ರಾ ದಿನಾಂಕ : 10.03.2017 ರಲ್ಲಿ ರಾಮನಗರ–ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕರವನ್ನು ವಿಭಜಿಸಿ ಚನ್ನಪಟ್ಟಣ ತಾಲ್ಲೂಕಿನ 116 ಗ್ರಾಮಗಳನ್ನೊಳಗೊಂಡಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಎ) ರಂತೆ ಸರ್ಕಾರವು ಚನ್ನಪಟ್ಟಣ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದೆ.

ಸದರಿ ಅಧಿಸೂಚನೆಯಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಸಿ)ರಲ್ಲಿ ಚನ್ನಪಟ್ಟಣ ಯೋಜನ ಪ್ರಾಧಿಕಾರವನ್ನು ರಚಿಸಿ ಆದೇಶಿಸಲಾಗಿದೆ.

## ಪ್ರಾಧಿಕಾರದ ರಚನೆ:

| ಕ್ರಮ ಸಂಖ್ಯೆ | ಪದನಾಮ | ಹೆಸರು ಮತ್ತು ವಿಳಾಸ |
|---|---|---|
| 01 | ಅಧ್ಯಕ್ಷರು | ಸರ್ಕಾರದಿಂದ ನೇಮಿಸಲಾಗುವುದು |
| 02 | ಸದಸ್ಯ ಕಾರ್ಯದರ್ಶಿ | ಸಹಾಯಕ ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ |
| 03 | ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು | 1. ಚನ್ನಪಟ್ಟಣ ನಗರಸಭೆಯ ಚುನಾಯಿತ ಸದಸ್ಯರೊಬ್ಬರು.<br>2.ಚನ್ನಪಟ್ಟಣ ನಗರಸಭೆಯ ಪೌರಾಯುಕ್ತರು /ಆಡಳಿತಾಧಿಕಾರಿ |
| 04 | ಮೂರು ಜನ ಇತರೆ ಸದಸ್ಯರು | ಸರ್ಕಾರದಿಂದ ನೇಮಿಸಲ್ಪಡುವ ಅಧಿಕಾರೇತರ ಸದಸ್ಯರು |

ಸರ್ಕಾರದ ಆದೇಶ ಸಂಖ್ಯೆ:ನಅಇ/237/ಬೆಂರೂಪ್ರಾ/2017 ದಿನಾಂಕ:13.03.2017 ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4–ಸಿ(3)(i) ಮತ್ತು 4–ಸಿ(iv)ರಂತೆ ಶ್ರೀ ಎ.ಸಿ ವೀರೇಗೌಡ ಇವರನ್ನು ಅಧ್ಯಕ್ಷರನ್ನಾಗಿ ಮತ್ತು ಸದಸ್ಯರನ್ನು ನೇಮಿಸಿ ಆದೇಶಿಸಲಾಗಿದ್ದು, ಸದರಿಯವರ ಅವಧಿಯು ದಿನಾಂಕ:02.06.2018ಕ್ಕೆ ಮುಕ್ತಾಯವಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ/128/ಬಿಎಂಆರ್/2018 ದಿನಾಂಕ:06.08.2018ರಲ್ಲಿ ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರನ್ನು ಈ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿ ಆದೇಶವಾಗಿರುತ್ತದೆ. ಉಳಿದಂತೆ ಚನ್ನಪಟ್ಟಣ ನಗರಸಭೆಯ ಚುನಾಯಿತ ಸದಸ್ಯರೊಬ್ಬರು, ನಗರ ಸಭೆಯ ಪೌರಾಯುಕ್ತರು ಮತ್ತು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಉಪವಿಭಾಗಾಧಿಕಾರಿಗಳು ಸದಸ್ಯರಾಗಿರುತ್ತಾರೆ.

ದಿನಾಂಕ: 01.04.2018 ರಿಂದ 31.03.2019ರವರೆಗಿನ ಪ್ರಾಧಿಕಾರದ ರಚನೆ ಈ ಕೆಳಕಂಡಂತೆ ಇರುತ್ತದೆ.

| ಕ್ರಸಂ | ಪ್ರಾಧಿಕಾರದ ಅಧ್ಯಕ್ಷರು ಹಾಗೂ ಸದಸ್ಯರು | ಅವಧಿ | ಪದನಾಮ |
|---|---|---|---|
| 1. | ಶ್ರೀ ಎ.ಸಿ ವೀರೇಗೌಡ | 01.04.02018 ರಿಂದ02.06.2018 | ಅಧ್ಯಕ್ಷರು |
| 2. | ಶ್ರೀ ಮೋಹನ್ ರಾಜ್, IAS | 03.06.2018 ರಿಂದ 31.03.2019 | ಅಧ್ಯಕ್ಷರು |
| 3. | ಉಪವಿಭಾಗಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ | 03.06.2018 ರಿಂದ 31.03.2019 | ಸದಸ್ಯರು |
| 4. | ಶ್ರೀ ಉಮಾಶಂಕರ್, ಚನ್ನಪಟ್ಟಣ ನಗರಸಭೆಯ ಚುನಾಯಿತ ಪ್ರತಿನಿಧಿ | 03.06.2018 ರಿಂದ 31.03.2019 | ಸದಸ್ಯರು |
| 5. | ಪೌರಾಯುಕ್ತರು, ಚನ್ನಪಟ್ಟಣ ನಗರಸಭೆ, ಚನ್ನಪಟ್ಟಣ. | 01.04.2018 ರಿಂದ 31.03.2019 | ಸದಸ್ಯರು |
| 6. | ಶ್ರೀ ಜಗನ್ನಾಥ | 01.04.2018 ರಿಂದ 31.03.2019 | ಸದಸ್ಯ ಕಾರ್ಯದರ್ಶಿ |

## ಪ್ರಾಧಿಕಾರದ ಕಾರ್ಯ ಚಟುವಟಿಕೆಗಳು:

1. ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ ತಯಾರಿಕೆ: ಯೋಜನಾ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಪಟ್ಟಣ ಮತ್ತು ಅಭಿವೃದ್ಧಿ ಪಥದಲ್ಲಿ ಇರುವ ಗ್ರಾಮಗಳ ಭೌತಿಕ, ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಿ ಮಹಾಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರಂತೆ ಈ ಮಹಾಯೋಜನೆಯನ್ನು ಬಿಎಂಆರ್‌ಡಿಎ ಮುಖಾಂತರ ಸರ್ಕಾರಕ್ಕೆ ಸಲ್ಲಿಸಿ ಸರ್ಕಾರದಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗುತ್ತದೆ.
2. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿಯಲ್ಲಿ ಸಂಬಂಧಿಸಿದ ಇಲಾಖೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ತಾಂತ್ರಿಕ ನೆರವು ಮತ್ತು ಅಭಿಪ್ರಾಯ ನೀಡುವುದು.
3. ವ್ಯವಸಾಯ ಭೂಮಿಯನ್ನು ವ್ಯವಸಾಯೇತರ ಉದ್ದೇಶಗಳಿಗಾಗಿ ಭೂ ಪರಿವರ್ತನೆ ಮಾಡುವ ಬಗ್ಗೆ ಕಂದಾಯ ಇಲಾಖೆಗೆ (ಜಿಲ್ಲಾಧಿಕಾರಿಗಳಿಗೆ) ತಾಂತ್ರಿಕ ಅಭಿಪ್ರಾಯ (NOC) ನೀಡುವುದು.
4. ಭೂ ಪರಿವರ್ತನೆಯಾಗಿರುವ ಜಮೀನುಗಳಿಗೆ ವಸತಿ, ವಾಣಿಜ್ಯ, ಕೈಗಾರಿಕೆ ಮತ್ತು ಇತರೆ ಉದ್ದೇಶದ ವಿನ್ಯಾಸ ನಕ್ಷೆಗಳಿಗೆ ಅನುಮೋದನೆ ನೀಡುವುದು.
5. ಸ್ಥಳೀಯ ಸಂಸ್ಥೆಯಾದ ಚನ್ನಪಟ್ಟಣ ನಗರಸಭೆಯಿಂದ ಕಟ್ಟಡ ನಕ್ಷೆ ಅನುಮೋದನೆ ಸಂಬಂಧ ತಾಂತ್ರಿಕ ಅಭಿಪ್ರಾಯ ಕೋರಿ ಬರುವ ಕಡತಗಳಿಗೆ ತಾಂತ್ರಿಕ ಅಭಿಪ್ರಾಯ ನೀಡುವುದು.
6. ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಪ್ರಾಧಿಕಾರದಿಂದ ಅನುಮೋದನೆಯಾದ ಬಡಾವಣೆಯಲ್ಲಿ ಬರುವ ಕಟ್ಟಡ ನಕ್ಷೆಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವುದು.

## ಪ್ರಾಧಿಕಾರದ ಕಾರ್ಯ ವಿಧಾನ ಮತ್ತು ಕರ್ತವ್ಯಗಳು :

| ಕ್ರ.ಸಂ | ಅಧ್ಯಕ್ಷರು | ಸದಸ್ಯ ಕಾರ್ಯದರ್ಶಿ | ಸದಸ್ಯರು |
|---|---|---|---|
| 1. | ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮ 1965 ರನ್ವಯ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸುತ್ತಾರೆ. | ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ-4 (H) ರಂತೆ ಹಾಗೂ ಸಭೆಯ ನಿರ್ಣಯದಂತೆ ಕಾರ್ಯಗಳನ್ನು ನಿರ್ವಹಿಸುವುದು. | ಪ್ರಾಧಿಕಾರದ ಸಭೆಯಲ್ಲಿ ಭಾಗವಹಿಸಿ ನಿರ್ಣಯ ಕೈಗೊಳ್ಳುವುದು. |

## ಕರ್ತವ್ಯ ನಿರ್ವಹಣೆಗಾಗಿ ನಿಗಧಿ ಪಡಿಸಲಾದ ಸೂತ್ರಗಳು:

ಪ್ರಾಧಿಕಾರದ ಕಾರ್ಯನಿರ್ವಹಣೆಯು ವಿವಿಧ ಕಾಯ್ದೆಗಳಲ್ಲಿ ನೀಡಿರುವ ಸೂಚನೆಗಳಂತೆ ಸರ್ಕಾರದಿಂದ ಜಾರಿಗೊಳಿಸಲಾದ ಆದೇಶಗಳು, ಸುತ್ತೋಲೆಗಳು ಮತ್ತು ವಿವಿಧ ಹಂತಗಳಲ್ಲಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳನ್ನು ಅನುಸರಿಸಿ ಕರ್ತವ್ಯಗಳನ್ನು ನಿರ್ವಹಿಸಲಾಗುತ್ತದೆ.

## ಪ್ರಾಧಿಕಾರದಲ್ಲಿ ಈ ಕೆಳಕಂಡ ನಿಯಮ/ಕಾಯ್ದೆಗಳನ್ನು ಪರಿಗಣಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ:

1. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961.
2. ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು 1965.
3. ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ 1964.
4. ಕರ್ನಾಟಕ ಸಿನಿಮಾ (Regulations) ಕಾಯ್ದೆ 1964.
5. ಭೂ ಸ್ವಾಧೀನ ಕಾಯ್ದೆ.
6. ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956.
7. ಕರ್ನಾಟಕ ಹೆದ್ದಾರಿ ಅಧಿನಿಯಮ 1964.
8. ಕರ್ನಾಟಕ ಸ್ಲಂ ಏರಿಯಾ ಕಾಯ್ದೆ, 1973.
9. ಕರ್ನಾಟಕ ಇಂಡಸ್ಟ್ರೀಯಲ್ ಏರಿಯಾ ಡೆವಲಪ್ಮೆಂಟ್ ಕಾಯ್ದೆ, 1966.
10. ಕರ್ನಾಟಕ ಗೃಹ ಮಂಡಳಿ (K.H.B) ಕಾಯ್ದೆ, 1962.
11. ಕೆ.ಸಿ.ಎಸ್.ಆರ್. 1957.
12. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕಾಯ್ದೆ(Prevention and control of pollution)Act, 1974.
13. ಕರ್ನಾಟಕ ರಾಜ್ಯ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳ ಕಾಯ್ದೆ 1964 ಕಾಯ್ದೆ.
14. ಕರ್ನಾಟಕ ರಾಜ್ಯ ಲೋಕೋಪಯೋಗಿ ಬಂದರು ಮತ್ತು ಒಳನಾಡು ಸಾರಿಗೆ ಕಾಯ್ದೆ 1856.
15. ಕರ್ನಾಟಕ ರಾಜ್ಯ ವಿದ್ಯುತ್ ಪ್ಸರಣ ಕಾಯ್ದೆ 2003.

## ಪ್ರಾಧಿಕಾರದ ಕಛೇರಿಯ ಅಧೀನದಲ್ಲಿ ಲಭ್ಯವಿರುವ ದಸ್ತಾವೇಜುಗಳು:

1. ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಗ್ರಾಮಗಳ ನಕ್ಷೆಗಳು.
2. ಅನುಮೋದಿತ ವಿನ್ಯಾಸ ನಕ್ಷೆಗಳು.
3. ಪ್ರಾಧಿಕಾರದ ಅನುಮೋದಿತ ವಿನ್ಯಾಸದಲ್ಲಿನ ನಿವೇಶನಗಳಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾದ ಕಡತಗಳು.
4. ಭೂ ಪರಿವರ್ತನೆ ಮಾಡುವ ಬಗ್ಗೆ ಕಂದಾಯ ಇಲಾಖೆಗೆ ಅಭಿಪ್ರಾಯ ನೀಡಲಾದ ಕಡತಗಳು.
5. ನಗರಸಭೆ ವ್ಯಾಪ್ತಿಯಲ್ಲಿ ಕಟ್ಟಡ ಕಟ್ಟಲು ತಾಂತ್ರಿಕ ಅಭಿಪ್ರಾಯ ನೀಡಲಾದ ಕಡತಗಳು.
6. ಆಯವ್ಯಯ ನಗದು ಪುಸ್ತಕಗಳು.
7. ದಾಸ್ತಾನು ಪುಸ್ತಕ.

## ಮಾಹಿತಿ ಹಕ್ಕು ಅಧಿನಿಯಮ 2005:

ಮಾಹಿತಿ ಹಕ್ಕು ಅಧಿನಿಯಮ 2005 ಮತ್ತು ನಿಯಮಗಳ ಅಡಿಯಲ್ಲಿ ಪ್ರಾಧಿಕಾರದಲ್ಲಿ ಸದಸ್ಯ ಕಾರ್ಯದರ್ಶಿಗಳು ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

1. ಸಕ್ಷಮ ಪ್ರಾಧಿಕಾರ – ಸದಸ್ಯ ಕಾರ್ಯದರ್ಶಿ, ಚನ್ನಪಟ್ಟಣ ಯೋಜನಾ ಪ್ರಾಧಿಕಾರ.
2. ಅಪೀಲು ಪ್ರಾಧಿಕಾರ – ಸದಸ್ಯ ಕಾರ್ಯದರ್ಶಿ, ಚನ್ನಪಟ್ಟಣ ಯೋಜನಾ ಪ್ರಾಧಿಕಾರ.
3. ಮೇಲ್ಮನವಿ ಪ್ರಾಧಿಕಾರ – ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಪ್ರಸಕ್ತ ವರ್ಷದಲ್ಲಿ 08 ಅರ್ಜಿಗಳನ್ನು ಸ್ವೀಕರಿಸಿದ್ದು, 08 ಅರ್ಜಿಗಳಿಗೆ ಮಾಹಿತಿ/ಹಿಂಬರಹ ನೀಡಲಾಗಿದೆ.

## ಅಂತರ್‌ಜಾಲ (Website):

ಚನ್ನಪಟ್ಟಣ ಯೋಜನಾ ಪ್ರಾಧಿಕಾರದ ಮಾಹಿತಿ ಅಂತರ್‌ಜಾಲ (Website) www.channapattana.tpa.gov.in ರಲ್ಲಿ ಲಭ್ಯವಿರುತ್ತದೆ. ಇದರಲ್ಲಿ ಚನ್ನಪಟ್ಟಣ ಯೋಜನಾ ಪ್ರಾಧಿಕಾರದ ಸಾರ್ವಜನಿಕವಾಗಿ ಅವಶ್ಯಕವಾದ ಮಾಹಿತಿ ಲಭ್ಯವಿರುತ್ತದೆ ಮತ್ತು ವಿವರಗಳು ಪಾರದರ್ಶಕವಾಗಿ ಸಿಗುವಂತೆ ಮಾಡಲಾಗಿದೆ.

## ಮಹಾಯೋಜನೆ ತಯಾರಿಸುವ ಕುರಿತು:

ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ/77/ಬಿಎಂಆರ್/2017, ದಿನಾಂಕ:17.07.2017ರ ಆದೇಶದಲ್ಲಿ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಚನ್ನಪಟ್ಟಣ ಯೋಜನಾ ಪ್ರಾಧಿಕಾರಕ್ಕೆ ಪ್ರತ್ಯೇಕ ಮಹಾಯೋಜನೆ ತಯಾರಿಸಲು ಆದೇಶವಾಗಿದ್ದು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರ ಉಸ್ತುವಾರಿಯಲ್ಲಿ ಮಹಾಯೋಜನೆ ತಯಾರಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಚನ್ನಪಟ್ಟಣ ಯೋಜನಾ ಪ್ರಾಧಿಕಾರಗಳ ಮಹಾಯೋಜನೆ ತಯಾರಿಕ ಕಾರ್ಯವನ್ನು ಮೆ॥ ಸ್ಕೈ ಗ್ರೂಪ್ ಇವರಿಗೆ ವಹಿಸಲಾಗಿರುತ್ತದೆ. ಚನ್ನಪಟ್ಟಣ ಯೋಜನಾ ಪ್ರಾಧಿಕಾರದ ಮೂಲ ನಕ್ಷೆ (BASE MAP)ಯನ್ನು ತಯಾರಿಸುವ ಕಾರ್ಯ ಅಂತಿಮ ಹಂತದಲ್ಲಿದ್ದು ಮಹಾಯೋಜನೆ ತಯಾರಿಕೆಯು ಈ ವರ್ಷಾಂತ್ಯದೊಳಗೆ ಪೂರ್ಣಗೊಳಿಸಲಾಗಿವುದು.

## ಸಾರ್ವಜನಿಕ ಮಾಹಿತಿಗಾಗಿ ಸೌಲಭ್ಯಗಳು:

ಚನ್ನಪಟ್ಟಣ ಯೋಜನಾ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಪ್ರಮುಖ ವಿಷಯಗಳ ಕುರಿತು ಪ್ರಕಟಣೆಗಳನ್ನು ಹಾಗೂ ಮಾಹಿತಿಗಳನ್ನು ಪ್ರಾಧಿಕಾರದ ಕಛೇರಿಯ ಸೂಚನಾ ಫಲಕದಲ್ಲಿ ಸಾರ್ವಜನಿಕರ ಗಮನಕ್ಕೆ ತರಲಾಗುತ್ತಿದೆ.

ಈ ಪ್ರಾಧಿಕಾರಕ್ಕೆ ಪ್ರತ್ಯೇಕ ಮಹಾಯೋಜನೆ ಇಲ್ಲದ ಕಾರಣ ರಾಮನಗರ–ಚನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಧ್ಯಂತರ ಮಹಾಯೋಜನಾ ನಕ್ಷೆಯ ಭೂ

ಉಪಯೋಗವನ್ನೆ ಉಪಯೋಗಿಸಲು ಸರ್ಕಾರದಿಂದ ಆದೇಶವಾಗಿದ್ದು, ಅದರಂತೆ ಕ್ರಮ ವಹಿಸಲಾಗುತ್ತಿದೆ.

1. **<u>ಭೂ ಪರಿವರ್ತನೆ :</u>** ಚನ್ನಪಟ್ಟಣ ಯೋಜನಾ ಪದೇಶದಲ್ಲಿ ಬರುವ ಜಮೀನುಗಳಲ್ಲಿ ಭೂ ಪರಿವರ್ತನೆಗಾಗಿ ತಾಂತ್ರಿಕ ಅಭಿಪ್ರಾಯ ನೀಡಲು ಜಿಲ್ಲಾಧಿಕಾರಿಗಳಿಂದ ಸ್ವೀಕರಿಸಲಾಗುವ ಪ್ರಸ್ತಾವನೆಗಳಿಗೆ ಸರ್ಕಾರದಿಂದ ರಾಮನಗರ–ಚನ್ನಪಟ್ಟಣ ನಗರಾಭಿವೃದ್ದಿ ಪ್ರಾಧಿಕಾರಕ್ಕೆ ಅನುಮೋದನೆಯಾಗಿರುವ ಮಧ್ಯಂತರ ಮಹಾಯೋಜನೆ (IMP) ಯ ಭೂ ಉಪಯೋಗ ಹಾಗೂ ವಲಯ ನಿಯಮಾವಳಿಗಳಂತೆ ಪರಿಶೀಲಿಸಿ, ತಾಂತ್ರಿಕ ಅಭಿಪ್ರಾಯಗಳನ್ನು (NOC) ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗುತ್ತಿದೆ. ಪ್ರಸ್ತುತ ಸಾಲಿನಲ್ಲಿ ಕಂದಾಯ ಇಲಾಖೆಯಿಂದ ಈ ಪ್ರಾಧಿಕಾರಕ್ಕೆ ವ್ಯವಸಾಯದ ಜಮೀನುಗಳನ್ನು ವ್ಯವಸಾಯೇತರ ವಿವಿಧ ಉದ್ದೇಶಗಳಿಗೆ ಭೂ ಪರಿವರ್ತನೆ ಸಂಬಂಧ 40 ಕಡತಗಳಿಗೆ ತಾಂತ್ರಿಕ ಅಭಿಪ್ರಾಯ ನೀಡಲಾಗಿದೆ.

2. **<u>ವಿನ್ಯಾಸ ಅನುಮೋದನೆ:</u>** ಪ್ರಾಧಿಕಾರದಿಂದ ಭೂ ಪರಿವರ್ತನೆಗೆ ಅಭಿಪ್ರಾಯ ನೀಡಿದ ನಂತರ ಜಿಲ್ಲಾಧಿಕಾರಿಗಳು ಭೂ ಪರಿವರ್ತನೆಗೊಳಿಸಿ ಆದೇಶವನ್ನು ಜಾರಿಗೊಳಿಸುತ್ತಾರೆ. ತದನಂತರ, ಭೂ ಪರಿವರ್ತನಾ ಆದೇಶದ ಜೊತೆಗೆ ಅರ್ಜಿದಾರರು ಪ್ರಾಧಿಕಾರಕ್ಕೆ ವಿನ್ಯಾಸ ಅನುಮೋದನೆ ಕೋರಿ ಅರ್ಜಿ ಸಲ್ಲಿಸುತ್ತಾರೆ. ಈ ರೀತಿ ಸ್ವೀಕೃತಿಗೊಂಡ ಅರ್ಜಿಗಳನ್ನು ನಿಯಮಾವಳಿಗಳನ್ವಯ ಪ್ರಾಧಿಕಾರದಲ್ಲಿ ತಾಂತ್ರಿಕವಾಗಿ ಪರಿಶೀಲಿಸಿದ ನಂತರ ಪ್ರಾಧಿಕಾರದ ಸಭೆಯಲ್ಲಿ ವಿಷಯವನ್ನು ಮಂಡಿಸಿ, ಸಭೆಯ ಆಡಳಿತಾತ್ಮಕ ಅನುಮೋದನೆ ಪಡೆದು ವಿನ್ಯಾಸ ಅನುಮೋದನೆ ಅಭಿವೃದ್ಧಿ ಪಡಿಸುವಿಕೆ ಮತ್ತು ವಿನ್ಯಾಸಗಳಲ್ಲಿಯ ನಿವೇಶನಗಳನ್ನು ಬಿಡುಗಡೆಗೊಳಿಸುವ ಕುರಿತು ಅನುಸರಿಸಬೇಕಾದ ವಿಧಿ ವಿಧಾನಗಳ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ/24/ಶಾಸನ/2015, ಬೆಂಗಳೂರು, ದಿನಾಂಕ:10–09–2015 ರಂತೆ ಸರ್ಕಾರ ಅಧಿಸೂಚನೆಯನ್ನು ಹೊರಡಿಸಿದ್ದು, ಸದರಿ ಅಧಿಸೂಚನೆಯಂತೆ ಪ್ರಥಮ ಹಂತದಲ್ಲಿ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗುತ್ತಿದ್ದು, ವಿನ್ಯಾಸದ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡ ನಂತರ ವಿನ್ಯಾಸದ ಎಲ್ಲಾ ಶೇ. 100 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಸೂಚಿಸಲಾಗಿರುತ್ತದೆ. ಅದರಂತೆ, ಪ್ರಸ್ತುತ ಮೇಲ್ಕಂಡ ಅಧಿಸೂಚನೆಯಲ್ಲಿ ವಿವರಿಸಿದಂತೆ ವಿನ್ಯಾಸ ಅನುಮೋದನೆ ನೀಡಲು ಕ್ರಮ ವಹಿಸಲಾಗುತ್ತಿದೆ.

   ಪ್ರಸ್ತುತ ಸಾಲಿನಲ್ಲಿ <u>01</u> ವಸತಿ ಉದ್ದೇಶದ ವಿನ್ಯಾಸ ನಕ್ಷೆಗೆ ಹಾಗೂ <u>03</u> ವಸತಿ ಉದ್ದೇಶದ ಏಕ ನಿವೇಶನ ನಕ್ಷೆಗಳು ಮತ್ತು 1ಶೈಕ್ಷಣಿಕ ಉದ್ದೇಶ ಅಭಿವೃದ್ದಿ ನಕ್ಷೆ ಒಟ್ಟು <u>05</u> ರೂಪುರೇಖೆಗಳಿಗೆ ಅನುಮೋದನೆ ನೀಡಿ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಅನುಷ್ಠಾನಗೊಳಿಸಲು ಕಳುಹಿಸಲಾಗಿದೆ.

3. **<u>ಕಟ್ಟಡ ಕಟ್ಟಲು ತಾಂತ್ರಿಕ ಅಭಿಪ್ರಾಯ/ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ:</u>** ಚನ್ನಪಟ್ಟಣ ಯೋಜನಾ ಪ್ರಾಧಿಕಾರ ವ್ಯಾಪ್ತಿಯ ಚನ್ನಪಟ್ಟಣ ನಗರಸಭೆಯಿಂದ ಕಟ್ಟಡ ಕಟ್ಟಲು ಬರುವ ಕಡತಗಳಿಗೆ ಸರ್ಕಾರದ ಆದೇಶದಂತೆ ತಾಂತ್ರಿಕ ಅಭಿಪ್ರಾಯ ನೀಡಲಾಗುತ್ತಿದ್ದು, ದಿನಾಂಕ: 01.04.2018 ರಿಂದ 31.03.2019ರವರೆಗೆ ನಗರಸಭೆಯಿಂದ ಬಂದ 113 ಕಡತಗಳಿಗೆ ತಾಂತ್ರಿಕ ಅಭಿಪ್ರಾಯ ನೀಡಲಾಗಿದೆ ಹಾಗೂ ನಗರಸಭೆಹೊರತುಪಡಿಸಿ ಪ್ರಾಧಿಕಾರದ ವ್ಯಾಪ್ತಿಯ ಅನುಮೋದಿತ ವಿನ್ಯಾಸಗಳಲ್ಲಿ ಬರುವ ಕಟ್ಟಡ ನಕ್ಷೆಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗುತ್ತಿದ್ದು, 2018–19ನೇ ಸಾಲಿನಲ್ಲಿ ಯಾವುದೇ ಕಡತಗಳು ಸ್ವೀಕೃತವಾಗಿರುವುದಿಲ್ಲ.

## <u>ಪ್ರಾಧಿಕಾರದ ಸಭೆಗಳು:</u>

ಪ್ರಸ್ತುತ ಸಾಲಿನಲ್ಲಿ ಪ್ರಾಧಿಕಾರದಲ್ಲಿ ಒಟ್ಟು 02 ಸಭೆಗಳನ್ನು ನಡೆಸಲಾಗಿದ್ದು, ಸದರಿ ಸಭೆಗಳಲ್ಲಿ ಕೈಗೊಂಡ ತೀರ್ಮಾನಗಳನ್ನು ನಿಯಮಾನುಸಾರ ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

## ಚನ್ನಪಟ್ಟಣ ಯೋಜನಾ ಪ್ರಾಧಿಕಾರದ ಕಛೇರಿಯ ಸಿಬ್ಬಂದಿ ವಿವರ:

ಸರ್ಕಾರದ ಆದೇಶ ಸಂಖ್ಯೆ: ನಅಇ/92/ಬಿಎಂಆರ್/2017 ದಿನಾಂಕ: 02.03.2018 ರಲ್ಲಿ ಚನ್ನಪಟ್ಟಣ ಯೋಜನಾ ಪ್ರಾಧಿಕಾರಕ್ಕೆ ಈ ಕೆಳಕಂಡ ಹುದ್ದೆಗಳನ್ನು ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಸೃಜಿಸಿ ನಿಯೋಜನೆ ಮೇರೆಗೆ ಭರ್ತಿ ಮಾಡಲು ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ | ಹುದ್ದೆಯ ಪದನಾಮ | ಮಂಜೂರಾದ ಹುದ್ದೆ | ನೇಮಕಾತಿ ವಿಧಾನ | ಷರಾ |
|---|---|---|---|---|
| 1 | ನಗರ ಮತ್ತು ಗ್ರಾಮಾಂತರ ಯೋಜನೆ ಉಪ ನಿರ್ದೇಶಕರು | 01 | ನಿಯೋಜನೆ | |
| 2 | ನಗರ ಯೋಜಕರು | 01 | | |
| 3 | ಸಹಾಯಕ ನಗರ ಯೋಜಕರು | 01 | | |
| 4 | ಪ್ರಥಮ ದರ್ಜೆ ಸಹಾಯಕರು | 01 | | |
| 05 | ಕಂಪ್ಯೂಟರ್ ಆಪರೇಟರ್ | 01 | ಹೊರಗುತ್ತಿಗೆ | |
| 06 | ದಲಾಯತ್ | 01 | | |

ಪ್ರಾಧಿಕಾರದ ದೈನಂದಿನ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ಬಾಹ್ಯ ಮೂಲದಿಂದ (Out Source) ಈ ಕೆಳಕಂಡ ನೌಕರರ ಸೇವೆಯನ್ನು ಪಡೆಯಲಾಗಿದೆ.

| | | |
|---|---|---|
| 1. | ಸಹಾಯಕ ನಗರ ಯೋಜಕರು | 01 |
| 2. | ಪ್ರಥಮ ದರ್ಜೆ ಸಹಾಯಕರು | 01 |
| 3. | ಕಂಪ್ಯೂಟರ್ ಆಪರೇಟರ್ | 01 |
| 4. | ವಾಹನ ಚಾಲಕರು | 01 |
| 5. | ದಲಾಯತ್ | 01 |

## ಪ್ರಾಧಿಕಾರದ ಆಯ-ವ್ಯಯ (Budget)

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 68(ಬಿ) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು 1965ರ ನಿಯಮ 22 ರನ್ವಯ ಚನ್ನಪಟ್ಟಣ ಯೋಜನಾ ಪ್ರಾಧಿಕಾರದ 2019-20ನೇ ಸಾಲಿನ ಆಯ-ವ್ಯಯವನ್ನು ತಯಾರಿಸಿ ದಿನಾಂಕ : 19.02.2019 ರಂದು ನಡೆದ ಪ್ರಾಧಿಕಾರದ 08ನೇ ಸಭೆಯಲ್ಲಿ ಮಂಡಿಸಿ, ಸಭೆಯ ಅಂಗೀಕಾರದೊಂದಿಗೆ ಜಿಲ್ಲಾಧಿಕಾರಿಗಳ ಅನುಮೋದನೆಗಾಗಿ ಸಲ್ಲಿಸಿದ್ದು, ಅನುಮೋದನೆಯ ನಂತರ ಸರ್ಕಾರಕ್ಕೆ ಸಲ್ಲಿಸಲಾಗುವುದು.

## ಪ್ರಸಕ್ತ ಸಾಲಿನ ಹಣಕಾಸಿನ ವಿವರ:

ಪ್ರಾಧಿಕಾರದ ಕಛೇರಿ ಪ್ರಾರಂಭಿಸಲು ಅತ್ಯಾವಶ್ಯಕವಾದ ಪೀಠೋಪಕರಣಗಳು, ಲೇಖನ ಸಾಮಾಗ್ರಿಗಳು, ಗಣಕ ಯಂತ್ರ, ಪ್ರಿಂಟರ್ ಹಾಗೂ ಇತರೆ ಸಾಮಾಗ್ರಿ ಖರೀದಿಸಲು ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿಯಿಂದ ಶೇ. 06 ರ ಬಡ್ಡಿ ದರದಲ್ಲಿ 15 ಲಕ್ಷ ರೂಗಳ ಮರುಪಾವತಿ ಸಾಲವನ್ನು ಪಡೆಯಲಾಗಿದೆ. ಈ ಹಣಕಾಸು ವರ್ಷದಲ್ಲಿ ಉತ್ತಮತೆ ಶುಲ್ಕ ಮತ್ತು ಇತರೆ ಬಾಬ್ತುಗಳಿಂದ ಒಟ್ಟು ರೂ. 28,40,155/– ಗಳನ್ನು ಹಾಗೂ ಕೆರೆ ಸಂರಕ್ಷಣಾ ಶುಲ್ಕ ರೂ. 9,73,600/–ಗಳನ್ನು ಸಂಗ್ರಹಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ ರೂ. 13,66,610/–ಗಳನ್ನು ವೆಚ್ಚ ಮಾಡಲಾಗಿದೆ.

## ಪ್ರಾಧಿಕಾರದ ಆದಾಯ ಮತ್ತು ವೆಚ್ಚಗಳು :

2018–19ನೇ ಸಾಲಿನ 01.04.2018 ರಿಂದ 31.03.2019 ವರೆಗಿನ ಆದಾಯ ಮತ್ತು ವೆಚ್ಚಗಳು ಈ ಕೆಳಕಂಡಂತಿರುತ್ತವೆ.

| ಕ್ರಮ ಸಂಖ್ಯೆ | ಆದಾಯ | ಮೊತ್ತ | ಕ್ರಮ ಸಂಖ್ಯೆ | ವೆಚ್ಚ | ಮೊತ್ತ |
|---|---|---|---|---|---|
| | ಪ್ರಾರಂಭಿಕ ಶಿಲ್ಕು | 15,92,683.82 | 01 | ಅಧ್ಯಕ್ಷರ ಗೌರವಧನ<br>ಮನೆ ಬಾಡಿಗೆ ಭತ್ಯೆ<br>ವಾಹನ ಬಾಡಿಗೆ ಭತ್ಯೆ | 27,000.00<br>13,500.00<br>30,772.00 |
| 01 | ಅರ್ಜಿ ಶುಲ್ಕ | 2,800.00 | | | |
| 02 | ಪರಿಶೀಲನೆ,ಉಸ್ತುವಾರಿ ಮತ್ತು ಉತ್ತಮತೆ ಶುಲ್ಕ | 24,26,388.00 | | | |
| 03 | ಕೆರೆ ಸಂರಕ್ಷಣೆ ಶುಲ್ಕ | 9,73,600.00 | 02 | ಹೊರಗುತ್ತಿಗೆ ನೌಕರರ ವೇತನ | 6,66,884.00 |
| 04 | ಇತರೆ | 230.00 | 03 | ವಿದ್ಯುತ್ ಬಿಲ್ ವೆಚ್ಚ | 445.00 |
| 05 | ಬ್ಯಾಂಕ್ ಬಡ್ಡಿ | 36515.40 | 04 | ಸ್ಟಾಂಪ್ ಖರೀದಿ | 1,000.00 |
| 06 | ಭದ್ರತಾ ಠೇವಣಿ | 3,74,222.00 | 05 | ಕಛೇರಿ ಕಟ್ಟಡ ಬಾಡಿಗೆ | 2,19.922.00 |
| | | | 06 | ಪೀಠೋಪಕರಣ ಖರೀದಿ | 39,648.00 |
| | | | 07 | ಕಛೇರಿ ನಾಮ ಫಲಕ ವೆಚ್ಚ | 7,914.00 |
| | | | 08 | ಸಾದಿಲ್ವಾರು | 13,599.00 |
| | | | 09 | ಸ್ವಚ್ಛತಾ ವೆಚ್ಚ | 18,000.00 |
| | | | 10 | ಪ್ರಕಟಣೆ ವೆಚ್ಚ | 23,417.00 |
| | | | 11 | ಮುದ್ರಣ ಮತ್ತು ಲೇಖನ ಸಾಮಗ್ರಿ ವೆಚ್ಚ | 6,600.00 |
| | | | 12 | ಕಛೇರಿ ಒಳವಿನ್ಯಾಸ ವೆಚ್ಚ | 2,44,888.00 |
| | | | 13 | ಟಿ.ಡಿ.ಎಸ್ ಪಾವತಿ ವೆಚ್ಚ | 34,479.00 |
| | | | 14 | ಬ್ಯಾಂಕ್ ಚಾರ್ಜ್‌ಸ್ | 1,135.00 |
| | | | 15 | Returns filling ವೆಚ್ಚ | 1,100.00 |
| | | | 16 | ದೂರವಾಣಿ ವೆಚ್ಚ | 13,807.00 |
| | | | 17 | Dsc ವೆಚ್ಚ | 2,500.00 |
| | **ಆದಾಯ ರೂ** | **38,13755.40** | | ರೂ ವೆಚ್ಚ | **13,66,610.00** |
| | | | | ಅಂತಿಮ ಶಿಲ್ಕು<br>ಉತ್ತಮತೆ ಶುಲ್ಕ &ಇತರೆ–ರೂ.27,35,994.59<br>ಕೆರೆ ಸಂರಕ್ಷಣೆ ಶುಲ್ಕ –ರೂ.13,03,834.63 | 40,39,829.22 |
| | **ಒಟ್ಟು ರೂ** | **54,06,439.22** | | **ಒಟ್ಟು ರೂ** | **54,06,439.22** |

ಸದಸ್ಯ ಕಾರ್ಯದರ್ಶಿ,
ಚನ್ನಪಟ್ಟಣ ಯೋಜನಾ ಪ್ರಾಧಿಕಾರ,
ಚನ್ನಪಟ್ಟಣ

# CHANNAPATANA PLANNING AUTHORITY, CHANNAPATANA

# Annual Report for the year 2018-19 (From 01.04.2018 to 31.03.2019)

**No. 2850, 1st floor, church Road, Rajakempegowda Layout, Channapattana – 562 160.**

**E-mail: cptpa2017@gmail.com**

# Channapatna Planning Authority
# Annual Report For the Year 2018-19

## Introduction:-

The Channapattana Planning Authority is working under the administrative control of the government and it is a statutory body constituted by the government, this Planning Authority is functioning in its Rented building at **No. 2850, 1st floor, Church Road, Rajakempegowda Layout, Channapattana – 562 160.**

The Commissioner BMRDA is the Chairman of the Authority, The Assistant Director, Kanakapura Planning Authority additional charge as member Secretary of the this Authority.

## Functions of the Channapatna Planning Authority:-

**The Primary functions of the Planning Authority includes:**

- Preparation and enforcement of Master Plan for the local planning area,
- Furnishing Technical opinion to Revenue Department for Conversion of Agricultural Lands to Non-Agricultural purposes,
- Approval of layouts within the local planning area,
- Technical opinion of building plans,
- Commencement certificate of building plan in approved layout & development plans,
- Other statutory function under KTCP Act,

## Preparation of Master Plan:

As per the Government order No. UDD/77/BMR/2017 Dated:17.07.2017 Channapatana planning authority was adopted Master plan & Zonal regulation of Ramanagara-channapatna development Authority interior master plan approved by the Government until the separate Master plan approval for Channapatana planning Authority. Preparation of Master plan through conducting physical, socio and economic survey and to prepare the master plan for the local planning area and to submit the same for approval of the government as per the Karnataka Town and Country planning act 1961. Preparation of Master plan for the Channapatana Planning Authority is entrusted to M/s Sky group, now final stage of base map is under progress.

## Duties of the Officers and Members

| Sl. No. | Chairman | Member-Secretary | Members |
|---|---|---|---|
| 1. | Conduct the authority meeting in the jurisdiction of LPA as per the Karnataka Planning Authority rules 1965. | To carrying out overall supervision/execution of the office works and to implement the planning authority meeting decisions as per the sec-4(H) of the Karnataka town and country planning act 1961. | To participate in the authority meetings and to discuss the various subjects in the meeting in the decision making aspects. |

## Various goals set for the discharge of the Duties by the Planning Authority :

The Planning authority is discharging its duties as per the guidelines of the various government orders/circulars and carries out its functions in implementing the decisions taken at the authority meetings at various stages.

## Various acts/rules comes under the purview of day to day functions of the authority :

a. The Karnataka town and country planning act 1961.
b. The Karnataka planning authority rules 1965.
c. The Karnataka Municipality act 1964.
d. The Karnataka Cinema (regulations) act 1964
e. The National highway act 1956.
f. The Karnataka Highway authority rules 1964.
g. The Karnataka Slum area act 1973.
h. The Karnataka Industrial area development act 1966.
i. The Karnataka housing board (K.H.B) act 1962.
j. K.C.S.R. 1957.

**Details of the assets and inventories available at the Channapatana planning authority office :**

1. Village maps of all the villages coming under the jurisdiction of LPA.
2. Layout maps Approved by the planning authority since its inception.
3. The files pertaining to the technical opinion given to the revenue department.
4. Budget and cash books.
5. Stock register.

**Activities of the Planning Authority:-**

1. Preparation of Master Plan for Local Planning Area: To carry physical, social and economical survey of the towns and developing villages coming within the jurisdiction of the Authority to prepare Master Plan for the Local Planning Area and submitting of the Master Plan to the Government for approval and for implementation as per the Karnataka Town & Country Planning Act, 1961.
2. To furnish opinion and extend technical opinion under Karnataka Town & country Planning Act to concerned departments & institutes.
3. To furnish technical opinion to the revenue department in regard to conversion of agriculture land into Non-agriculture use.
4. To accord approval to the lands converted for formation of layouts and Development Plans for residential, commercial, industrial and other purposes, to issue Commencement Certificate for construction of buildings and to issue technical opinion to the local body.

**Criteria adopted for discharge of duties:-**

The working of the Authority is based on the Karnataka Town & Country Planning Act, 1961, Rules and Regulations of concerned local authorities, government orders & Circulars and the decisions taken during the meetings of the Authority.

**Rules / Acts followed in the Authority;-**

1. Karnataka Town & Country Planning Act, 1961.
2. Karnataka Planning Authority Rules, 1965.
3. Karnataka Municipalities Act, 1964.
4. Karnataka Cinema (Regulations) Act, 1964.
5. National Highway Act, 1956.
6. Karnataka State Highway Act, 1964.
7. Karnataka Slum Area Act, 1973.
8. Karnataka Industrial Area Development Act, 1966.
9. Karnataka Housing Board (K.H.B) Act, 1962.
10. K.C.S.R. 1957.

## Documents available in the Authority:-

1. Approved Interim Master Plan maps and report.
2. Village maps coming under Channapatna Local Planning Area.
3. Approved layout plans.
4. Files pertaining to opinion furnished to Revenue Department in regard to conversion of land.
5. Budget, Cash Book and Property Register.
6. Stock Register.

## Furnishing of information under Right to Information Act- 2005:-

Public Information Officer and the Planning Authority member secretary is the Public Information Officer under the Right to Information Act-2005 and the following officers are required to be contacted in regard to public information under the Right to Information Act-2005.

| | |
|---|---|
| Competent Authority | Member Secretary, Channapatna Planning Authority, Channapatna Planning Authority, Channapatna. |
| Appellate Authority | Metro-Politian Commissioner, Bangalore Metro-Politian Regional Development Authority, Bangalore and Chairman Channapatna planning Authority. |

## Web-site:-

The information in respect of Channapatna Planning Authority are available on the Web-site–www.channapattana.tpa.gov.in The Transparency of public information and details of information are available for public.

## Facilities provided for general public:-

The important information and publication of Channapatna Planning Authority are displayed on the notice board of office for the general information of the public.

1. **Land Conversion :** The Planning Authority is giving the technical opinion for the conversion of the lands from agriculture to non-agricultural purpose to the proposals received from the Revenue Department as per the provisions of Zonal Regulations. In the current financial year 2018-19 the planning authority office has given the technical opinion for 40 files.

2. **Approval of Layouts:**
   The Deputy Commissioner issue land conversion orders on the basis of the technical opinion furnished by the Authority. Thereafter, the applicants submit application for approval of layout enclosing the order copy of conversion of land. Such proposals are scrutinized in accordance with rules, and the subject will be placed before the meeting of the Authority and after approval of the Authority, Presently, the layouts are approved as per modified government order bearing No. VyaShaEe/24/Shasan/2015, dated: 10.09.2015. During the year 2018-19, 01 layout approved after verification of all the development works and on the basis of certificate issued by the concerned departments. 03 residential single layouts were approved.

3. **Issue of Technical opinion & commencement certificates for the construction of buildings :** The Planning authority will issue technical opinion to the Local body for issue of commencement certificates in respect of the proposals received from the local bodies of its jurisdictions for the construction of the buildings under sec 15 of the Karnataka Town and Country Planning Act 1961. The technically approved building plan will be sent to the concerned Local body to take up further action at their end.

**Meetings of the Authority:-**

The Authority has conducted 02 meetings in a financial year and taken action to implement the decisions of the Authority as per rules.

***Staffs Details***

| **Sl. No.** | **Designation** | **No. of posts sanctioned** | **Number of Post filled** | | | **No. post vacant** | **Remarks** |
|---|---|---|---|---|---|---|---|
| | | | **Male** | **Female** | **Total** | | |
| 1. | Deputy Director | 1 | -- | -- | -- | | |
| 2. | Town Planner | 1 | -- | -- | -- | | |
| 3. | Assistant Town Planner | 1 | -- | -- | -- | | |
| 4. | First Divisional Assistant | 1 | | | | | |
| 5. | Second Divisional Assistant/ Data Entry Operator | 1 | | | | | |
| 6. | Group-D | 1 | | | | | |

**Outsource Service:**

| Sl.No | Name of the Post | **Number of Post filled** |
|---|---|---|
| 1. | Assistant Town Planner | 1 |
| 2. | First Division Assistant | 1 |
| 3. | Data Entry Operator | 1 |
| 4. | Attender | 1 |
| 5. | Driver | 1 |

(The above posts filled through outsource)

## Budget of the Authority:-

The budget estimation for the year 2019-20 was placed in the 8th meeting of the Authority on 19.02.2019 as per Sec-68(b) of Karnataka Town & Country Planning Act Act, 1961 and Rule 22 of the Karnataka Planning Authority Rules, 1965 and the Authority meeting accepted the budget estimate and sent the budget copies to Deputy Commissioner for approval after getting the approval copies will be sent to government.

## Details of Income and expenditure

### Income and expenditure details for the year 2018-19

### From:01.04.2018 to 31.03.2019

| Sl. No. | Income | Total | Sl No. | Expenditure | Total |
|---|---|---|---|---|---|
| | Initial Deposit | 15,92,683.82 | 01 | Chairman Honorary | 27,000.00 |
| 01 | Application fees | 2,800.00 | 02 | Chairman rent allowance | 13,500.00 |
| 02 | Superviion & Betterment fees | 24,26,388.00 | 03 | Chairman vehicle allowance | 30,772.00 |
| 03 | Tank Rejuvenation fees | 9,73,600.00 | 04 | Outsource Bill payment | 6,66,884.00 |
| 04 | Others | 230.00 | 05 | Electric Bill | 445.00 |
| 05 | Bank interest | 36515.40 | 06 | Purchase of stamps | 1,000.00 |
| 06 | Security deposit | 3,74,222.00 | 07 | Office building rent | 2,19.922.00 |
| | | | 08 | Furniture purchase | 39,648.00 |
| | | | 09 | Office name board expenditure | 7,914.00 |
| | | | 10 | Imprest | 13,599.00 |
| | | | 11 | Office cleaning Charges | 18,000.00 |
| | | | 12 | Notice fees | 23,417.00 |
| | | | 13 | Printing and stationary | 6,600.00 |
| | | | 14 | Office Interior Design | 2,44,888.00 |
| | | | 15 | TDS payment | 34,479.00 |
| | | | 16 | Bank charges | 1,135.00 |
| | | | 17 | Returns filling fees | 1,100.00 |
| | | | 18 | Telephone Bill | 13,807.00 |
| | | | 19 | DSC Fees | 2,500.00 |
| | **Total Income** | **38,13755.40** | | Total Expenditure | **13,66,610.00** |
| | | | | Closing Balance | 40,39,829.22 |
| | **Total** | **54,06,439.22** | | **Total** | **54,06,439.22** |

Sd/-
Member-Secretary,
Channapatna Planning Authority,
Channapatna.